**ಸಾಕ್ಷಿಗೆ ದಿನಾಂಕಃ12-11-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಮುಂದುವರೆದ ಪಾಟೀ ಸವಾಲು :: 1 ನೇ ಪ್ರತಿವಾದಿ ಪರ ಶ್ರೀ. SNR ವಕೀಲರಿಂದ ::**

ನಮ್ಮ ಸಂಸ್ಥೆಯಿಂದ ಮಾಡಿಸಿರುವ ಎಲ್ಲಾ ನಿವೇಶನಗಳ ಅಳತೆ ಒಂದೇ ಆಗಿರುವುದಿಲ್ಲ. ಈಶ್ವರಪ್ಪ ಮತ್ತು ಲಲಿತಮ್ಮ ರವರ ಸ್ವತ್ತಿನ ಅಳತೆ ನನಗೆ ನೆನಪಿಲ್ಲ. ನಮ್ಮ ಲೇಔಟ್ ನ ಉತ್ತರಕ್ಕೆ ಬಿ ಹೆಚ್ ರಸ್ತೆ ಬರುತ್ತದೆ. ಸಾಮಾನ್ಯವಾಗಿ ಸ್ವತ್ತಿನ ವಿಸ್ತೀರ್ಣಕ್ಕೆ ಇರುವ ಚೆಕ್ಕುಬಂದಿಯನ್ನೇ ನಮೂದಿಸಿ ನಾವು ಕೊಟ್ಟಿರುತ್ತೇವೆ ಎಂದರೆ ಸರಿ. ಈಶ್ವರಪ್ಪ ಮತ್ತು ಲಲಿತಮ್ಮ ರವರಿಗೆ ನೀಡಿರುವ ಸ್ವತ್ತಿಗೆ ತಾಗಿಕೊಂಡು ಬಿ ಹೆಚ್ ರಸ್ತೆ ಇರುವುದಿಲ್ಲ ಎಂದರೆ ಸಾಕ್ಷಿಯು ಅವರಿಗೆ ನೀಡಿರುವ ಎರಡು ನಿವೇಶಗಳಿಗೆ ಬಿ ಹೆಚ್ ರಸ್ತೆ ತಾಗಿಕೊಂಡು ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ನಮ್ಮ ಲೇಔಟ್ ನ ಉತ್ತರಕ್ಕೆ ಇರುವ ಎಲ್ಲಾ ನಿವೇಶನಗಳಿಗೆ ಬಿ ಹೆಚ್ ರಸ್ತೆ ತಾಗಿಕೊಂಡಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಲೇಔಟ್ ನ ಉತ್ತರಕ್ಕೆ ಸರ್ವೇ ನಂಬರ್ 80/2 ಜಮೀನು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಈಶ್ವರಪ್ಪ ಮತ್ತು ಲಲಿತಮ್ಮ ಸ್ವತ್ತಿನ ಉತ್ತರಕ್ಕೆ ಸರ್ವೇ ನಂಬರ್ 80/2 ರಲ್ಲಿ 5 ಗುಂಟೆ ಸ್ವತ್ತು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತನ್ನು 2012 ರಲ್ಲಿ ಕೃಷ್ಣಮೂರ್ತಿ ಎನ್ನುವವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ನಮ್ಮ ಲೇಔಟ್ ನ ಯಾವುದೇ ನಿವೇಶನದ ಯಾವುದೇ ದಿಕ್ಕಿನಲ್ಲಿ ಬಿ ಹೆಚ್ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಬಿ ಹೆಚ್ ರಸ್ತೆಗೆ ತಾಗಿಕೊಂಡು ಸರ್ವೇ ನಂಬರ್ 80/2 ಇದ್ದು, ಆದಾದನಂತರದಲ್ಲಿ ನಮ್ಮ ಲೇಔಟ್ ಬರುತ್ತದೆ ಎಂದರೆ ಸರಿಯಲ್ಲ. ನಾವು ಮಾರಾಟ ಮಾಡಿರುವ ಯಾವುದೇ ನಿವೇಶನಗಳ ಕ್ರಯಪತ್ರಗಳಲ್ಲಿ ಉತ್ತರಕ್ಕೆ ಬಿ ಹೆಚ್ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಹಳಿಯೂರು ಗ್ರಾಮದ ಗ್ರಾಮ ನಕಾಶೆಯನ್ನು ತೋರಿಸಲಾಗಿ ಅದನ್ನು ಸಾಕ್ಷಿ ನೋಡಿ ಒಪ್ಪಿದ ಕಾರಣ ಅದನ್ನು ನಿಡಿ1 ಎಂದು ಗುರುತಿಸಲಾಯಿತು. ನಿಡಿ1 ರಲ್ಲಿ ನನಗೆ ಬಿ ಹೆಚ್ ರಸ್ತೆ ಎಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಿಡಿ1 ನ್ನು ನೋಡಿ ನಮ್ಮ ಲೇಔಟ್ ಎಲ್ಲಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಿಡಿ1 ರ ಪ್ರಕಾರ ಸರ್ವೇ ನಂಬರ್ 80/2 ರ ನಂತರದಲ್ಲಿ ನಮ್ಮ ಲೇಔಟ್ ಇರುತ್ತದೆ ಎಂದರೆ ಸರಿಯಲ್ಲ. ಆದಕಾರಣ

ಈಶ್ವರಪ್ಪ ಹಾಗೂ ಲಲಿತಮ್ಮ ರವರಿಗೆ ಮಾರಿದ ನಿವೇಶನ ವಿಸ್ತೀರ್ಣಗಳನ್ನು ಸುಳ್ಳಾಗಿ ನೆನಪಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಸದರಿಯವರಿಗೆ ಮಾರಿದ ಜಾಗದ ಉತ್ತರಕ್ಕೆ ಬಿ ಹೆಚ್ ರಸ್ತೆ ಇದ್ದಲ್ಲಿ ಅವರ ಜಾಗದ ವಿಸ್ತೀರ್ಣ ಹೆಚ್ಚಾಗುತ್ತದೆ ಎಂದರೆ ಸರಿಯಲ್ಲ. ಈಶ್ವರಪ್ಪ ಹಾಗೂ ಲಲಿತಮ್ಮ ರವರ ಸ್ವತ್ತಿನ ವಿಸ್ತೀರ್ಣ ನನಗೆ ಎಷ್ಟು ಎಂದು ಗೊತ್ತಿಲ್ಲದಿದ್ದರೂ ಸಹ ನಾನು ಅವರ ಆಸ್ತಿಗಳ ಉತ್ತರಕ್ಕೆ ಬಿ ಹೆಚ್ ರಸ್ತೆ ಇರುವುದಾಗಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ1 ರಂತೆ ನಾವು ಕೇವಲ 30 x 40 ಅಡಿ ನಿವೇಶನವನ್ನು ವಾದಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ನಿಪಿ1 ನಮ್ಮ ಸಂಸ್ಥೆಯಿಂದ ನೀಡಿರುವ ಪತ್ರವಾಗಿರುತ್ತದೆ ಎಂದರೆ ಸರಿ. ಸದರಿ ಪತ್ರದಲ್ಲಿ ವಾದಿಯ ಸ್ವತ್ತಿನ ಉತ್ತರಕ್ಕೆ ನಿವೇಶನ 67/6 ರ ಉಳಿಕೆ ಜಾಗ ಇರುತ್ತದೆ ಎಂದು ನಮೂದು ಇರುತ್ತದೆ. ನನ್ನ ಪ್ರಕಾರ 67 ಎಂದು ನಮೂದಿಸಿರುವುದು ನಮ್ಮ ಲೇಔಟ್ ನ ನಿವೇಶನ ಆಗಿರುತ್ತದೆ ಎಂದರೆ ಸರಿ. ನಿಪಿ1 ರ ಪ್ರಕಾರ ವಾದಿಯ ಸ್ವತ್ತಿನ ಉತ್ತರಕ್ಕೆ ಬಿ ಹೆಚ್ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗೆ ನೀಡಿರುವ ನಿವೇಶನದ ಉತ್ತರ-ದಕ್ಷಿಣಕ್ಕೆ 67/5 ಮತ್ತು 67/7 ಇರುತ್ತದೆ ಎಂದರೆ ಸರಿ. ಸದರಿ ದಾಖಲೆಯ ಪ್ರಕಾರವು ಸಹ ವಾದಿಯ ಸ್ವತ್ತಿನ ಉತ್ತರಕ್ಕೆ ಬಿ ಹೆಚ್ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ6 ರಲ್ಲೂ ಸಹ ದಾವಾ ಶೆಡ್ಯೂಲ್ ಸ್ವತ್ತಿನ ಯಾವುದೇ ದಿಕ್ಕಿನಲ್ಲೂ ಸಹ ಬಿ ಹೆಚ್ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ಅವರ ಸ್ವತ್ತಿಗೆ ಯಾವ ಚೆಕ್ಕುಬಂದಿ ತೋರಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ವಾದಿಯ ಸ್ವತ್ತಿನ ಯಾವುದೇ ದಿಕ್ಕಿನಲ್ಲಿ ನಾನು ಹೇಳುತ್ತಿರುವಂತೆ ಬಿ ಹೆಚ್ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ.

**:: ಮುಂದುವರೆದ ಪಾಟೀ ಸವಾಲು :: 2 ಡಿ ನೇ ಪ್ರತಿವಾದಿ ಪರ ಶ್ರೀ. TDA ವಕೀಲರಿಂದ ::**

**1 ನೇ ಪ್ರತಿವಾದಿ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರುತ್ತಾರೆ.**

**(2 ಎ ರಿಂದ ಸಿ ಪ್ರತಿವಾದಿಗಳು ಏಕ ಪಕ್ಷೀಯವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)**

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಪ್ರಧಾನ ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ

ತರೀಕೆರೆ.

ಸಾಕ್ಷಿಯ ಸಹಿ: